ಮನಸ್ಸಿನಿಂದ ಅವರಿಗೂ ಚಾಲನಾ ಪರವಾನಗಿ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಅಮೆರಿಕದಲ್ಲಿ ಕೂಡ ಇಂತಹ ನಿಯಮ ಇದೆ. ಆದರೆ ಶ್ರವಣ ದೋಷಕ್ಕೆ ಒಳಗಾದವರು ಅತ್ಯುತ್ತಮ ಚಾಲಕರಾಗಿರುತ್ತಾರೆ. ಯಾಕೆಂದರೆ ಅವರಿಗೆ ತಮ್ಮ ಮಿತಿ ಗೊತ್ತಿದೆ. ಆ ಕಾರಣದಿಂದಾಗಿ ಅವರು ಹೆಚ್ಚು ಜಾಗರೂಕರಾಗಿರುತ್ತಾರೆ. 'ನಮ್ಮ ನಡುವೆ ಸಾಕಷ್ಟು ಮಂದಿ ಶ್ರವಣದೋಷಕ್ಕೆ ಒಳಗಾದವರು ವಾಹನ ಚಾಲನೆ ಮಾಡುತ್ತಿದ್ದಾರೆ. ಆದರೆ ಅವರು ಅಪಘಾತ ಮಾಡಿದ ಉದಾಹರಣೆ ಕಡಿಮೆ' ಎಂದು 'ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ'ಯ ನಿವೃತ್ತ ನಿರ್ದೇಶಕ ಡಾ. ನ. ರತ್ನ ಅಭಿಪ್ರಾಯಪಡುತ್ತಾರೆ.

**ಮಕ್ಕಳೊಂದಿಗೆ ಪೋಷಕರದೂ ಸಾಧನೆ**

ಅಂಗವಿಕಲರಿಗೆ ಹಿಡಿದ ಕೆಲಸವನ್ನು ಬಿಡದೇ ಸಾಧಿಸುವ ಛಲ ಇರುತ್ತದೆ. ಅವರ ತಂದೆ ತಾಯಿಯರೂ ಕೂಡ ಇದಕ್ಕೆ ಬೆಂಬಲ ನೀಡುತ್ತಾರೆ. ಮಗುವಿನ ದೋಷವನ್ನು ಗುರುತಿಸುವ ಅವರು ಸಾಧನೆ ಮಾಡಲು ಅಗತ್ಯವಾದ ಎಲ್ಲ ಸೌಲಭ್ಯಗಳನ್ನೂ ಒದಗಿಸುತ್ತಾರೆ. ಮಗು ಸರಿಯಾದ ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳಲು ನೆರವಾಗುತ್ತಾರೆ. ನಿಜವಾದ ಅರ್ಥದಲ್ಲಿ ಅವರು ಪೋಷಕರಾಗಿರುತ್ತಾರೆ. ಇದರಿಂದಾಗಿಯೇ ದಿವ್ಯಾಂಗರು ಸಾಧನೆ ಮಾಡಲು ಸಾಧ್ಯವಾಗುತ್ತದೆ. ಸಾಮಾನ್ಯ ಮಕ್ಕಳ ಬಗ್ಗೆಯೂ ಇದೇ ರೀತಿಯ ಮುತುವರ್ಜಿಯನ್ನು ಪೋಷಕರು ವಹಿಸಿದರೆ ಅವರೂ ಕೂಡ ಅಪ್ರತಿಮ ಸಾಧನೆ ಮಾಡುತ್ತಾರೆ ಎಂದು ರತ್ನ ಹೇಳುತ್ತಾರೆ.

'ಶ್ರವಣದೋಷಕ್ಕೆ ಒಳಗಾದ ಮಕ್ಕಳಿಗೆ ತಮ್ಮ

## ವೈಭವಿ ಭರತನಾಟ್ಯ ವೈಭವ



ಶ್ರವಣದೋಷಕ್ಕೆ ಒಳಗಾದ ಮಕ್ಕಳು ಹಾಡು ಕೇಳುವುದು ಕಷ್ಟ. ರಾಗ, ಲಯಗಳಿಗೆ ಸ್ಪಂದಿಸುವುದು ಸುಲಭದ ಮಾತಲ್ಲ. ನೃತ್ಯದ ಹೆಜ್ಜೆಯನ್ನು ರೂಢಿಸಿಕೊಳ್ಳುವುದು ವಿಪರೀತ ಶ್ರಮದ ಕೆಲಸ. ಕಿವಿ ಕೇಳದೇ ಇರುವವರಿಗೆ ನೃತ್ಯಾಭ್ಯಾಸ ಮಾಡಿಸುವುದು ಕಷ್ಟಸಾಧ್ಯ. ಆದರೂ ಚಿಕ್ಕಂದಿನಲ್ಲಿಯೇ ನೃತ್ಯಕ್ಕೆ ಮಾರುಹೋಗಿ ಭರತನಾಟ್ಯ ಅಭ್ಯಾಸ ಮಾಡಿದವಳು ಹುಬ್ಬಳ್ಳಿಯ ವೈಭವಿ ಕುಲಕರ್ಣಿ. ಈಕೆಯ ಅಕ್ಕ ಭರತನಾಟ್ಯ ಕಲಿಯುತ್ತಿದ್ದಳು. ಅದನ್ನು ನೋಡಿ ಇವಳಿಗೂ ಆಸಕ್ತಿ ಮೂಡಿತು. ಶ್ರವಣ ದೋಷದಿಂದ ಮಾತು ಬಾರದೇ ಇರುವ ಮಗಳಿಗೆ ಅಮ್ಮ ಮಾತು ಕಲಿಸಲು ಮುಂದಾದರೆ, ಈ ಹುಡುಗಿ 'ಮಾತು ಕಲಿಸುವುದು ಬೇಡ, ನೃತ್ಯ ಕಲಿಸು, ಹೆಜ್ಜೆ ಹಾಕುತ್ತೇನೆ' ಎಂದು ಹಟ ಮಾಡುತ್ತಿದ್ದಳಂತೆ. ಅದರಂತೆ ಮೈಸೂರಿನಲ್ಲಿ ಜ್ಯೋತಿ ಹೆಗಡೆ ಅವರ ಬಳಿ ನೃತ್ಯಾಭ್ಯಾಸ ಆರಂಭಿಸಿದಳು.

ಮೈಸೂರಿನಲ್ಲಿ ಮಾತಿನ ಜೊತೆಗೆ ಭರತನಾಟ್ಯದ ಪ್ರಾಥಮಿಕ ಹಂತವನ್ನು ಕಲಿತುಕೊಂಡ ವೈಭವಿ ಹುಬ್ಬಳ್ಳಿಗೆ ಬಂದ ಮೇಲೆ ನಾಟ್ಯಗುರು ಶ್ರುತಿ ಅವರಲ್ಲಿ ನೃತ್ಯಾಭ್ಯಾಸ ಮುಂದುವರಿಸಿದ್ದಾಳೆ. ಹುಬ್ಬಳ್ಳಿಯ ರೋಟರಿ ಕನ್ನಡ ಮಾಧ್ಯಮ ಶಾಲೆಯಲ್ಲಿ 6ನೇ ತರಗತಿ ಓದುತ್ತಿರುವ ವೈಭವಿ ಭರತನಾಟ್ಯವನ್ನೂ ಶ್ರದ್ಧೆಯಿಂದಲೇ ಕಲಿಯುತ್ತಿದ್ದಾಳೆ. ಈಗಾಗಲೇ ಸಾಕಷ್ಟು ಪ್ರದರ್ಶನವನ್ನೂ ನೀಡಿದ್ದಾಳೆ. ಧಾರವಾಡ ಉತ್ಸವದಲ್ಲಿ ಈಕೆಯ ಭರತನಾಟ್ಯ ಪ್ರದರ್ಶನ ನಡೆದಿದೆ. ಭರತನಾಟ್ಯ ಪರೀಕ್ಷೆಯಲ್ಲಿಯೂ ಉತ್ತೀರ್ಣಳಾಗಿರುವ ಈಕೆ ಸಂಗೀತ ಮತ್ತು ಸಾಹಿತ್ಯವನ್ನು ಅರ್ಥ ಮಾಡಿಕೊಂಡು ನೃತ್ಯ ಮಾಡುತ್ತಾಳೆ ಎಂದು ಆಕೆಯ ತಾಯಿ ಹೇಳುತ್ತಾರೆ. ನೃತ್ಯಕ್ಕಾಗಿ 'ಕಲಾ ಸಂಗಮ' ಪ್ರಶಸ್ತಿಯನ್ನೂ ಪಡೆದಿರುವ ವೈಭವಿ ನಾಟ್ಯದ ವಿಡಿಯೊಗಳು ಯುಟ್ಯೂಬ್‌ನಲ್ಲಿ ಜನಪ್ರಿಯವಾಗಿವೆ. ಕಿವುಡುತನ ಹೊಂದಿದವರಿಗೆ ಸಂಗೀತ ಮತ್ತು ನೃತ್ಯ ಒಲಿಯುವುದಿಲ್ಲ ಎನ್ನುವುದನ್ನು ವೈಭವಿ ಸುಳ್ಳು ಮಾಡಿದ್ದಾಳೆ.



ಭರವಸೆಯ ನಾಳೆಗಳಿಗೆ
ವರ್ತಮಾನದ ತಾಲೀಮು